ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು

ಸಿಸಿ7765/2021

| | | |
|---|---|---|
| ಸಾಕ್ಷಿದಾರರ ಹೆಸರು | - ಶಂಕರ | ಚಾಸಾ-4 |
| ತಂದೆಯ ಹೆಸರು | - ಲಿಂಗಯ್ಯ | ಪ್ರಾಸಾ-2 |
| ವಯಸ್ಸು | - 48 ವರ್ಷ | |
| ಉದ್ಯೋಗ | - ಮುಖ್ಯ ಪೇದೆ, | |
| ವಾಸಸ್ಥಳ | - ಮಂಡ್ಯ | |

ದಿನಾಂಕಃ- 23-06-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎಪಿಪಿ ರವರಿಂದಃ-**

ನಾನು 2013 ರಿಂದ 2023 ರವರೆಗೆ ಮಾನ್ಯ ಮದ್ದೂರಿನ ಶಾಸಕರಾದ ಡಿ ಸಿ ತಮ್ಮಣ್ಣರವರಿಗೆ ಅಂಗರಕ್ಷರಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕ 19-09-2021 ರಂದು ಸಮಯ 12-10 ರಲ್ಲಿ ಮಾನ್ಯ ಶಾಸಕರ ಮನೆಯ ಹತ್ತಿರ ಈ ಪ್ರಕರಣದ ಆರೋಪಿ ಮನೆಯ ಹತ್ತಿರ ಹೋಗಿ ಅವಾಚ್ಯ ಶಬ್ಧಗಳಿಂದ ಬೈಯುತ್ತಿರುತ್ತಾರೆ. ನಾನು ಹಾಗೂ ಚಾಸಾ-5 ರವರುಗಳು ಏಕೆ ಈ ರೀತಿ ಬೈಯುತ್ತೀದ್ದೀಯಾ ಎಂದು ಕೇಳಿದಾಗ ನಮ್ಮನ್ನು ಬೈದು ಅಲ್ಲಿಯೇ ಇದ್ದ ಕಿಟಕಿಗಳನ್ನು ತಲೆಯಿಂದ ಗುದ್ದಿ ಕಿಟಕಿಯ ಗಾಜುಗಳನ್ನು ಹಾಗೂ ಅಲ್ಲಿಯೇ ಇದ್ದ ಪಾಟ್ ಗಳನ್ನು ಸಹ ಹೊಡೆದು ಹಾಕಿರುತ್ತಾನೆ. ಇದನ್ನು ನೋಡಿದ ತಕ್ಷಣ ನಾನು ಚಾಸಾ-10 ರವರಿಗೆ ಕರೆ ಮಾಡಿ ವಿಚಾರ ತಿಳಿಸಿರುತ್ತೇನೆ. ಆಗ ಚಾಸಾ-10 ರವರು ಚಾಸಾ-1 ಮತ್ತು 2 ರವರನ್ನು ಮನೆಯ ಹತ್ತಿರ ಕಳುಹಿಸಿಕೊಟ್ಟಿರುತ್ತಾರೆ. ಆ ಸಮಯದಲ್ಲಿ ಚಾಸಾ-1 ಮತ್ತು 2 ರವರುಗಳು ಆರೋಪಿಯನ್ನು ವಿಚಾರಿಸಿದಾಗ ಆರೋಪಿಯು ಅವರಿಗೂ ಸಹ ಬೈದು ಚಾಸಾ-1 ರವರಿಗೆ ಕೈಯನ್ನು ನುಣುಚಿರುತ್ತಾರೆ. ಆಗ ಚಾಸಾ-2 ರವರಿಗೆ ಹಲ್ಲಿನಿಂದ ಎಡಗೈಯನ್ನು ಕಚ್ಚಿರುತ್ತಾರೆ. ನಂತರ ಆರೋಪಿಯನ್ನು ಅಲ್ಲಿದ್ದ ಸಾರ್ವಜನಿಕರ ಸಹಾಯದಿಂದ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ವೀಡಿಯೋ ಕಾನ್ಫರೆನ್ಸ್ ಮೂಲಕ ಹಾಜರುಪಡಿಸಿದ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಯ ಪರ ಎಲ್ ಡಿ ಸಿ ವಕೀಲರಾದ ಶ್ರೀಮತಿ ವೈ ಸಿ ಪಿ ರವರಿಂದಃ-**

ಸಾಮಾನ್ಯವಾಗಿ ಶಾಸಕರ ಮನೆಗೆ ಹೋಗಬೇಕಾದರೆ ಮೊದಲೇ ಅನುಮತಿ ಪಡೆದುಕೊಂಡು ಹೋಗಬೇಕೆಂದರೆ ಸರಿಯಲ್ಲ. ಶಾಸಕರ ಮನೆಗೆ ಸೆಕ್ಯೂರಿಟಿ ಗಾರ್ಡ್ ಇಲ್ಲ. ನನಗೆ ಆರೋಪಿಯ ಪರಿಚಯ ಇರುತ್ತದೆ ಎಂದರೆ ಸರಿಯಲ್ಲ. ಆರೋಪಿ ಜೆ ಡಿ ಎಸ್ ಕಾರ್ಯಕರ್ತರು ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ಆರೋಪಿ ಜೆ ಡಿ ಎಸ್ ಕಾರ್ಯಕರ್ತಾಗಿರುವುದರಿಂದ ನನಗೆ ಆರೋಪಿಯ

ಪರಿಚಯವಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯು ಶಾಸಕರ ಮನೆಯ ಮುಂದೆ ಗಲಾಟೆ ಮಾಡುವುದನ್ನು ನಾನೇ ತಡೆದು ಪೊಲೀಸರಿಗೆ ಮಾಹಿತಿಯನ್ನು ನೀಡಿರುತ್ತೇನೆ. ಈ ಹಿಂದೆಯೂ ಸಹ ಆರೋಪಿಯ ವಿರುದ್ಧ ಶಾಸಕರ ಜೊತೆಯಲ್ಲಿದ್ದವರು ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಶಾಸಕರರಾದ ತಮ್ಮಣ್ಣ ಮತ್ತು ಆರೋಪಿಯ ನಡುವೆ ವೈ ಮನಸ್ಸು ಇದ್ದ ಕಾರಣ ನಾನು ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಎರಡನೇ ಅಪರ ಸಿವಿಲ್ ಮತ್ತು ಜೆಎಂಎಫ್,ಸಿ,

ನ್ಯಾಯಾಧೀಶರು, ಮದ್ದೂರು.

ಸಾಕ್ಷಿಯ ಸಹಿಃ